# ನಮ್ಮ ಮನೆದೇವ್ರ ಪಾತ್ರದಲ್ಲಿ ನಾನು

**ಮಾನಸ ನಾರಾಯಣ**
ಸ್ಟಾರ್ ಸುವರ್ಣ
'ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ' ನಾಯಕಿ

■ ರಾಘವೇಂದ್ರ ಕೆ.

◆ ಯಲ್ಲಮ್ಮನ ಪಾತ್ರಕ್ಕೆ ಮೇಕಪ್ ಮಾಡಿದಾಗ ಹೇಗಿತ್ತು?

ಬೇರೆ ರೀತಿಯ ಪಾತ್ರದಂತೆ ಇದಲ್ಲ. ಸಾಮಾಜಿಕ ಕಥೆಯಲ್ಲಿ ಮನೆಯಲ್ಲಿ ಹೇಗಿರುತ್ತೇವೊ ಹಾಗೆಯೇ ನಡೆದುಕೊಂಡರೆ ಆಗುತ್ತದೆ. ಇಲ್ಲಿ ಹಾಗೆ ಆಗುವುದಿಲ್ಲ. ಮೊದಲ ದಿನ ಬಣ್ಣ ಹಚ್ಚಿದಾಗ ಭಯ ಕಾಡಿತು. ಮೂರು ದಿನಗಳ ನಂತರವೇ ಸಹಜಸ್ಥಿತಿಗೆ ಬರಲು ಸಾಧ್ಯವಾಯಿತು. ಈ ಪಾತ್ರವನ್ನು ಒಪ್ಪಲು ಎರಡು ಕಾರಣಗಳು ನನಗೆ ಇದ್ದವು. ನಾವು ದೇವಿಯನ್ನು ಆರಾಧಿಸುವುದು ಒಂದು ಕಾರಣ. ನಿರ್ಮಾಣ ಸಂಸ್ಥೆ ಮೇಲಿನ ಒಲವು ಮತ್ತೊಂದು ಕಾರಣ. ಕನಸಿನಲ್ಲೂ ಇಂತಹ ಪಾತ್ರವನ್ನು ಮಾಡುತ್ತೇನೆ ಎಂದು ಭಾವಿಸಿರಲಿಲ್ಲ. ನನ್ನ ಆರಾಧ್ಯ ದೇವತೆಯ ಪಾತ್ರದಲ್ಲಿ ಕಾಣಿಸಿಕೊಳ್ಳುವುದು ತುಂಬ ಖುಷಿ ಕೊಟ್ಟಿದೆ. ಇಂತಹ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ನಮ್ಮ ಮನೆ ದೇವರು ಯಲ್ಲಮ್ಮ. ಆ ಪಾತ್ರಕ್ಕೆ ಸಿದ್ಧಗೊಳ್ಳುತ್ತಿದ್ದಂತೆ ಮನಸಿನಲ್ಲಿ ತಳಮಳ ಆಗುತ್ತಿತ್ತು.



◆ ನೀವು ನಟಿ ಆಗಿದ್ದು ಏಕೆ?

ಡಾನ್ಸರ್ ಆಗಬೇಕು ಎನ್ನುವ ಅಭಿಲಾಷೆ ಇತ್ತು. ಪೋಷಕರು ನಿರ್ಬಂಧ ಹಾಕಿದ್ದರಿಂದ ಅದರಲ್ಲಿ ಯಶಸ್ಸು ಕಾಣಲಿಲ್ಲ. ಆ ನಿಟ್ಟಿನ ಪ್ರಯತ್ನ ಮಾಡಿದ್ದೆ. ತರಗತಿಗೂ ಸೇರಿದ್ದೆ. ಆದರೆ ಅದರ ಪ್ರಯೋಜನವನ್ನು ಪಡೆಯಲು ಸಾಧ್ಯವೇ ಆಗಲಿಲ್ಲ. ಓದುತ್ತಿದ್ದಾಗಲೇ ಸ್ಥಳೀಯ ಟೀವಿ ವಾಹಿನಿಯಲ್ಲಿ ನಿರೂಪಣೆಯನ್ನು ಆರಂಭಿಸಿದೆ. ಅದು ನಮ್ಮ ಪೋಷಕರಿಗೂ ಪ್ರೇರಣೆಯನ್ನು ನೀಡಿತು ಎಂದೆನಿಸುತ್ತದೆ. ನನ್ನ ಕೆಲಸವನ್ನು ಮುಂದುವರಿಸಲು ಅನುಮತಿ ನೀಡಿದರು. ನನ್ನ ಇನ್‌ಸ್ಟಾ ಪ್ರೊಫೈಲ್ ನೋಡಿ ಹೈದರಾಬಾದಿನಿಂದ ಕರೆ ಬಂತು. ಅದಕ್ಕಾಗಿ ಆಡಿಷನ್ ಕೂಡ ಕೊಟ್ಟಿರಲಿಲ್ಲ. ಆಯ್ಕೆ ಮಾಡಿದ ನಂತರವೇ ಲುಕ್ ಟೆಸ್ಟ್ ಮಾಡಿದರು. ಮೊದಲು ತೆಲುಗು ಧಾರಾವಾಹಿಯಲ್ಲಿ ನಟಿಸಿದೆ. ನಂತರ ಬೇರೆ ಆಡಿಷನ್ ಕೊಡಲು ಶುರು ಮಾಡಿದೆ.

◆ ನಿಮ್ಮ ಕನಸಿನ ಪಾತ್ರದ ಬಗ್ಗೆ ಹೇಳಿ.

ಎಲ್ಲ ರೀತಿಯ ಪಾತ್ರಗಳನ್ನು ಮಾಡಿದ್ದೇನೆ. ನೆಗೆಟಿವ್ ಮಾಡಬೇಕು ಎನ್ನುವ ಆಸೆ ಇತ್ತು. ಅದೂ ಕೈಗೂಡಿತು. ಯಲ್ಲಮ್ಮ ದೇವರ ಪಾತ್ರವನ್ನು ನಿರ್ವಹಿಸಲು ಸಿಕ್ಕ ಅವಕಾಶ ಮಾತ್ರ ಅದ್ಭುತ ಎಂದೇ ಅಂದುಕೊಂಡಿದ್ದೇನೆ. ಕನಸಿನಲ್ಲಿ ನಿರೀಕ್ಷೆ ಮಾಡದ ಅಮೋಘ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಸಾಮಾಜಿಕ ಕಥೆಯಂತೆ ಇದಿಲ್ಲ. ಭಾಷೆಯಲ್ಲೂ ತುಂಬ ವ್ಯತ್ಯಾಸ ಇರುತ್ತದೆ. ಕಾಸ್ಟ್ಯೂಮ್ ಕೂಡ ಭಿನ್ನ.

◆ ಮೊದಲ ಧಾರಾವಾಹಿಯ ಅನುಭವ ಹೇಗಿತ್ತು?

ಆಗ ನಟನೆಯನ್ನು ಕಲಿತಿರಲ್ಲ. ಅದೇ ಮೊದಲ ಬಾರಿಗೆ ಬಣ್ಣ ಹಚ್ಚಿದ್ದೆ. ನನಗೆ ಭಾಷೆಯೂ ಗೊತ್ತಿರಲಿಲ್ಲ. ಏನು ಮಾಡಬೇಕು ಎಂದು ಕೇಳಲೂ ಬರುತ್ತಿರಲಿಲ್ಲ. ಕ್ಯಾಮೆರಾವನ್ನು ಎದುರಿಸುವ ತಂತ್ರ ಗೊತ್ತಿರಲಿಲ್ಲ. ಒಟ್ಟಾರೆ ಖಾಲಿ ಹಾಳೆಯಂತಿದ್ದೆ. ಅಲ್ಲೇ ತಿದ್ದಿ ನನ್ನಲ್ಲಿ ನಟಿಯನ್ನು ಹುಟ್ಟುಹಾಕಿದರು. ಅಂದಿನ ಪರಿಸ್ಥಿತಿಯನ್ನು ಎದುರಿಸಲಾಗದೆ ಬಿಟ್ಟು ಬರುವ ತೀರ್ಮಾನಕ್ಕೂ ಒಮ್ಮೆ ಬಂದಿದ್ದೆ. ಪೋಷಕರಿಗೆ ಇಷ್ಟ ಇಲ್ಲದಿದ್ದರೂ ಅವರನ್ನು ಒಪ್ಪಿಸಿ ಅಭಿನಯಿಸಲು ಬಂದಿದ್ದೇನೆ. ಹಾಗೇನಾದರೂ ಹೋದರೆ ಮತ್ತೆ ಇಂತಹ ಅವಕಾಶ ಸಿಗಲ್ಲ ಎಂದು ಮನಸ್ಸನ್ನು ಗಟ್ಟಿಮಾಡಿಕೊಂಡೆ. ಆಗಲೇ ಡಿಗ್ರಿ ಓದುತ್ತಿದ್ದೆ. ಓದಿನ ಬಗ್ಗೆ ಅಷ್ಟು ಆಸಕ್ತಿ ಇರಲಿಲ್ಲ. ಹೀಗಿರುವಾಗ ನಟನೆ ಬಿಟ್ಟರೆ ಮುಂದೆ ಓದುವುದೇ ಅನಿವಾರ್ಯ ಆಗುತ್ತಿತ್ತು.

◆ ನಿಮ್ಮ ಊರು ಕೇರಿಯಲ್ಲಿ ನಿಮ್ಮ ಬಗ್ಗೆ ಏನು ಹೇಳುತ್ತಾರೆ?

ದೊಡ್ಡಬಳ್ಳಾಪುರದ ಸಮೀಪ ಪುಟ್ಟ ಪಟ್ಟಣದಂತಿರುವ ಗುಡ್ಡದಹಳ್ಳಿ ನಮ್ಮೂರು. ಬಿಎಸ್‌ಸಿ ಮಾಡಿದ್ದೇನೆ. ಹೈದರಾಬಾದ್‌ಗೆ ಹೋಗಿ ಬಂದ ಮೇಲೆ ನೆಗೆಟಿವ್ ಪ್ರತಿಕ್ರಿಯೆಗಳೇ ಹೆಚ್ಚು ಬಂದಿದ್ದವು. ಅವೆಲ್ಲವನ್ನೂ ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ಊರಲ್ಲಿ ಅಂತಹ ದೂರುಗಳು ಬರುವುದು ಸಹಜ. ನಮ್ಮ ಉದ್ದೇಶ ಮತ್ತು ದಾರಿ ಸರಿ ಇದ್ದ ಮೇಲೆ ಬೇರೆಯವರ ಬಗ್ಗೆ ಯಾಕೆ ತಲೆ ಕೆಡಿಸಿಕೊಳ್ಳಬೇಕು? ನಗರದಲ್ಲಿ ಇಂತಹ ಸಮಸ್ಯೆ ಎದುರಾಗಲಾರವು. ಕೆಲವರು ದೂರದ ಊರಿಗೆ ಹೋಗಿ ಮಾಡುತ್ತಿರುವ ನನ್ನ ಕೆಲಸದ ಬಗ್ಗೆ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದಾರೆ. ಅದು ಏನೇ ಇರಲಿ, ಜನರ ಮಾತಿಗೆ ಬೇಸರ ಅನ್ನಿಸಿದರೂ ಅದನ್ನು ಮೆಟ್ಟಿ ನಿಲ್ಲಬೇಕು.

◆ ಹೊಸ ಕಲಾವಿದರು ನಿಮ್ಮ ಮಾರ್ಗದರ್ಶನ ಕೇಳಿದರೆ...

ಕಷ್ಟಪಟ್ಟು ಮಾಡಲು ಸಿದ್ಧ ಇದ್ದರೆ ಅವಕಾಶ ಸಿಗುತ್ತದೆ. ಮಾಡಬೇಕು ಎನ್ನುವ ಇಚ್ಛೆ ಬಲವಾಗಿ ಇರಬೇಕು. ಆಡಿಷನ್‌ಗೆ ಹೋದರೆ ಸಾಮಾನ್ಯವಾಗಿ ಸ್ವಂತ ಡೈಲಾಗ್ ಹೇಳಬೇಕಾಗುತ್ತದೆ. ಅದಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ನಿರ್ದಿಷ್ಟ ಪಾತ್ರಕ್ಕೆ ಆಗಿದ್ದರೆ ಡೈಲಾಗ್ ಶೀಟ್ ಕೊಡುತ್ತಾರೆ. ಅದನ್ನು ಓದಿ ಅರ್ಥ ಮಾಡಿಕೊಂಡು, ನಟಿಸಲು ಸಿದ್ಧರಾಗಬೇಕು. ಆಡಿಷನ್ ನೀಡುವ ಮೊದಲು ಅದನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಳ್ಳಬೇಕು. ಹೊಸತರಲ್ಲಿ ಭಯ ಸಹಜ, ಅದನ್ನು ಮೀರುವ ಪ್ರಯತ್ನವನ್ನು ನಿರಂತರ ಮಾಡಬೇಕು. ಕನ್ನಡಿ ಮುಂದೆ ನಿಂತು ನಟನೆಯನ್ನು ಕಲಿಯುವುದು ಹೆಚ್ಚು ಸೂಕ್ತ ಎಂದು ಸಲಹೆ ನೀಡುತ್ತೇನೆ. ■